
ಕ್ಲಾಸ್‌ರೂಂ ವಿತ್ ಎ ವ್ಯೂ: ನೋಟ್ಸ್ ಫ್ರಮ್ ದ ಕೃಷ್ಣಮೂರ್ತಿ ಸ್ಕೂಲ್ಸ್ | ಪುಸ್ತಕ ವಿಮರ್ಶೆ

ಅಂಕುರ್ ಮದನ್

ಅಶ್ವಿನ್‌ಪ್ರಭು ಅವರು ಬರೆದಿರುವ 'ಕ್ಲಾಸ್‌ರೂಂ ವಿತ್‌ಎ ವ್ಯೂ: ನೋಟ್ಸ್ ಫ್ರಮ್ ದ ಕೃಷ್ಣಮೂರ್ತಿ ಸ್ಕೂಲ್' ಪುಸ್ತಕವು ನೋಡಲು ಆಕರ್ಷಕವಾಗಿದೆ. ಕಪ್ಪುಬಿಳುಪು ಚಿತ್ರಗಳನ್ನು ಬಳಸಿ ಸಾಂಪ್ರದಾಯಿಕವಲ್ಲದ ವಿನ್ಯಾಸದಲ್ಲಿ ನಾಜೂಕಾಗಿ ಹೊರಬಂದಿರುವ ಈ ಪುಸ್ತಕ ಹಾಗೂ ಅಧ್ಯಾಯವನ್ನು ತಿರುವಿ ಹಾಕಿದಂತೆ ಓದಲು ಸಿಗುವ ಕೃಷ್ಣಮೂರ್ತಿಯವರ ಉಲ್ಲೇಖಗಳು ನಿಮ್ಮ ಗಮನವನ್ನು ಸೆಳೆಯುತ್ತವೆ ಮಾತ್ರವಲ್ಲದೆ ಪುಸ್ತಕವನ್ನು ಎತ್ತಿಕೊಳ್ಳುವಂತೆ ಪ್ರೇರೇಪಿಸುತ್ತವೆ. ಸರಳ ಭಾಷೆಯಲ್ಲಿ ಬರೆಯಲಾಗಿರುವ ಪಠ್ಯವು ಮುಖ್ಯವಾಗಿ ಶಿಕ್ಷಕರು, ಪೋಷಕರು ಮತ್ತು ಶಾಲಾ ಆಡಳಿತ ಮಂಡಳಿಯವರ ನಡುವೆ ವಿಸ್ತೃತ ಓದುಗರನ್ನು ಸಂಪಾದಿಸಲಿದೆ. ಪುಸ್ತಕದ ಲೇಖಕರಾದ ಅಶ್ವಿನ್‌ಪ್ರಭು ಅವರು, ಕೃಷ್ಣಮೂರ್ತಿಯವರ ಬೋಧನೆಯ ಕುರಿತು ಆಸಕ್ತಿ ಮೂಡಿ, ತನ್ನದೇ ಆದ ಶಾಲಾ ಅನುಭವದ ಕುರಿತು ಪರ್ಯಾಲೋಚಿಸಿ, ಕಾರ್ಪೊರೇಟ್ ಉದ್ಯಮವನ್ನು ತ್ಯಜಿಸಿ ಕೃಷ್ಣಮೂರ್ತಿ ಫೌಂಡೇಷನ್ ಇಂಡಿಯಾ (KFI) ಶಾಲೆಯಲ್ಲಿ ಬೋಧನೆಗೆ ಇಳಿದವರು. ತನ್ನನ್ನು ತಾನೇ ಸೂತ್ರಧಾರಿಯಾಗಿ (ನಿರೂಪಕಿ) ಉಲ್ಲೇಖಿಸಿ, ಬೋಧನೆಯಲ್ಲಿ ಕಳೆದ ಐದು ವರ್ಷಗಳಲ್ಲಿ ತಾನೇನು ಗಳಿಸಿದ್ದೇನೆ ಹಾಗೂ ಕೆ.ಎಫ್.ಐ ಶಿಕ್ಷಣ ಸಂಸ್ಥೆಗಳ ಸಮೂಹಕ್ಕೆ ಮಾರ್ಗದರ್ಶನ ನೀಡುತ್ತಿರುವ ಸಿದ್ಧಾಂತವೇನು ಎಂದು ಹೇಳಲು ಹಾಗೂ ಇದರ ಫಲತಾಂಶವಾಗಿ ಹೊರಹೊಮ್ಮುವ ಅಭ್ಯಾಸಗಳ ಮೇಲೆ ಬೆಳಕು ಹರಿಸುವುದಕ್ಕಾಗಿ ಲೇಖಕರು ಪುಸ್ತಕವನ್ನು ಮುಡಿಪಾಗಿರಿಸಿದ್ದಾರೆ.



ಶೀರ್ಷಿಕೆ: ಕ್ಲಾಸ್‌ರೂಂ ವಿತ್‌ಎ ವ್ಯೂ: ನೋಟ್ಸ್ ಫ್ರಮ್ ದ ಕೃಷ್ಣಮೂರ್ತಿ ಸ್ಕೂಲ್ಸ್
ಲೇಖಕರು: ಅಶ್ವಿನ್‌ಪ್ರಭು
ಪ್ರಕಾಶಕರು: ತಾರಾ (ಏಪ್ರಿಲ್ 2022)
ಭಾಷೆ: ಇಂಗ್ಲಿಷ್
ಪೇಪರ್‌ಬ್ಯಾಕ್: 224 ಪುಟಗಳು
ISBN-13 978-8195317356
ಬೆಲೆ: ರೂ 800

'ಶಾಲೆಯು ಯಾವ ವಿಚಾರಗಳಿಗೆ ತಾಣವೆನಿಸಿದೆ' ಎನ್ನುವ ಪ್ರಶ್ನೆಯನ್ನು ಮುಂದಿರಿಸಿ, ಈ ದಿಸೆಯಲ್ಲಿ ಮಾರ್ಗದರ್ಶನ ನೀಡುವ, ಕೃಷ್ಣಮೂರ್ತಿಯವರ ಅಭ್ಯಾಸಗಳು ಮತ್ತು ಶೈಕ್ಷಣಿಕ ಸಿದ್ಧಾಂತವನ್ನು ವಿವರಿಸುತ್ತಾ ಲೇಖಕರು ಮುಂದೆ ಸಾಗುತ್ತಾರೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಭಾಷಣೆಯ ರೂಪದಲ್ಲಿ, ಶಿಕ್ಷಕರು ಮಾಡಿರುವ ಅವಲೋಕನಗಳು ಮತ್ತು ಲೇಖಕರ ಟಿಪ್ಪಣಿಗಳು – ಹೀಗೆ ಅನೇಕ ಉಪಾಖ್ಯಾನಗಳು ವಿವರಣೆಗಳಿಗೆ ಜೀವ ತುಂಬುತ್ತವೆ. ಪ್ರಕಾಶಕರಾಗಿರುವ ತಾರಾ ಬುಕ್ಸ್‌ನ ವಿ. ಗೀತಾ ಅವರ ಟಿಪ್ಪಣಿಯು, ಕಾರ್ಯಾಗಾರಗಳು ಮತ್ತು ಪೂರಕ ಶಾಲಾ ಜಾಲಗಳೊಂದಿಗಿನ ಸಂವಾದದ ಮೂಲಕ ಶಿಕ್ಷಕರನ್ನು ತಲುಪುವುದರೊಂದಿಗೆ ಈ ಪುಸ್ತಕದಲ್ಲಿ ವಿವರಿಸಲಾದ ಅಭ್ಯಾಸಗಳ ವಿಸ್ತೃತ ಅನ್ವಯಕ್ಕೆ ಸೂಕ್ತ ಸಾಕ್ಷ್ಯಾಧಾರಗಳನ್ನು ಒದಗಿಸುತ್ತದೆ. ಕೆ.ಎಫ್.ಐ ಶಾಲೆಗಳು ಗಣ್ಯ – ಪರ್ಯಾಯ ವರ್ಗಕ್ಕೆ ಸೇರಿವೆ ಹಾಗೂ ಸಾಮಾನ್ಯ ಶಾಲೆಗಳು ಅವರ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಕಷ್ಟದ ವಿಚಾರ ಎನ್ನುವ ಸಾಮಾನ್ಯ ಭಾವನೆಯನ್ನು ದೂರ ಮಾಡಲು ಕೃತಿಕಾರರು ಯತ್ನಿಸುತ್ತಾರೆ. ಮಕ್ಕಳ ಕಲಿಕೆ ಮತ್ತು ಶಿಕ್ಷಣದ ಕುರಿತು ಕೃಷ್ಣಮೂರ್ತಿಯವರ ಪ್ರಸಿದ್ಧ ವಿಚಾರಧಾರೆಗಳೆನಿಸಿದ, ಭೀತಿಯಿಂದ ಮುಕ್ತಿ, ಸನ್ನಿವೇಶ ಏನೇ ಇರಲಿ, ಶಿಕ್ಷೆ ಮತ್ತು ಅಧಿಕಾರವು ಎಲ್ಲಾ ಮಕ್ಕಳ ಕಲಿಕೆಯಲ್ಲಿ ಕೇಂದ್ರಸ್ಥಾನವೆನಿಸುತ್ತದೆ – ಇತ್ಯಾದಿಗಳನ್ನು ಅವರ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಗೆ ಪ್ರಭು ಅವರು ಸಹ ಇದೇ ರೀತಿಯ ಪ್ರಯತ್ನವನ್ನು ಮಾಡಿದ್ದಾರೆ.

'ನೋಯಿಂಗ್ ಒನ್ ಸೆಲ್ಫ್' ಶೀರ್ಷಿಕೆಯ ಮೊದಲ ಅಧ್ಯಾಯವು, ಕೃಷ್ಣಮೂರ್ತಿಯವರ ಶೈಕ್ಷಣಿಕ ವಿಚಾರಧಾರೆಯ (educational philosophy) ಕೇಂದ್ರ ವಿಚಾರವಾಗಿರುವ ಸ್ವಯಂ ಅನ್ವೇಷಣೆಯ (self-enquiry) ಕುರಿತು ಬೆಳಕು ಹರಿಸುತ್ತದೆ. ರಿಶಿ ವ್ಯಾಲಿ ಶಾಲೆಯಲ್ಲಿ ಅನುಸರಿಸುವ 'ಪಶ್ಚಿಮ ಘಟ್ಟಗಳಲ್ಲಿ ಸೂರ್ಯಾಸ್ತವನ್ನು ವೀಕ್ಷಿಸುವ' 'ಅಸ್ತಾಚಲ'ವೆಂಬ ಅಭ್ಯಾಸವನ್ನು ಪ್ರಭು ಅವರು ಸವಿಸ್ತಾರವಾಗಿ ವಿವರಿಸುತ್ತಾರೆ. ಇಡೀ ದಿನವನ್ನು ಕೆಲಸದಲ್ಲಿ ಕಳೆದ ನಂತರ ಈ ಅಭ್ಯಾಸವನ್ನು ಪಾಲಿಸುವುದು ಮಕ್ಕಳು ಮತ್ತು ಶಿಕ್ಷಕರಿಬ್ಬರ ಪಾಲಿಗೂ ನಿಶ್ಶಬ್ದ ಅಥವಾ ನಿಶ್ಚಲತೆಯ ಭಾವವನ್ನು ಒದಗಿಸುತ್ತದೆ. ಒಟ್ಟಿಗೆ ನಿಶ್ಶಬ್ದವನ್ನು ಅನುಭವಿಸುವುದು, ಮಕ್ಕಳು ತಮ್ಮ ಆಂತರ್ಯಕ್ಕೆ ಗಮನ ಹರಿಸಲು ಮಾಡುವ ಒಂದು ಸುಂದರ ಅಭ್ಯಾಸವಾಗಿದೆ. ಎಳೆಯಮಕ್ಕಳು ಆರಂಭದಲ್ಲಿ ಹೇಗೆ ಈ ಅಭ್ಯಾಸಕ್ಕೆ ಪ್ರತಿರೋಧ ತೋರುತ್ತಾರೆ ಹಾಗೂ ಸ್ವಲ್ಪ ಮನವರಿಕೆ ಮತ್ತು ದೀರ್ಘ ಪ್ರಯತ್ನದ ಮೂಲಕ ಇದರ ಮೌಲ್ಯವನ್ನು ಅರಿತುಕೊಳ್ಳಲು ಪ್ರಾರಂಭಿಸುತ್ತಾರೆ ಎಂಬುದನ್ನು ಪ್ರಭು ಅವರು ವಿವರಿಸಿದ್ದಾರೆ. ಮುಕ್ತ ಮಾತುಕತೆ ಸಮಯ (circle Time) ಮತ್ತು ಸಂಸ್ಕೃತಿಯ ಕುರಿತ ತರಗತಿ ಇತ್ಯಾದಿ ಅಭ್ಯಾಸಗಳು ಸಹ ಈ ಉದ್ದೇಶಕ್ಕೆ ಹೇಗೆ ಕೊಡುಗೆಯನ್ನು ನೀಡುತ್ತವೆ ಎಂಬುದನ್ನು ವಿವರಿಸಲಾಗಿದೆ. ಆದರೆ ಸಂವಾದ ಮತ್ತು ಚರ್ಚೆಯ ಮಾಧ್ಯಮದ ಮೂಲಕ ಈ ಕೆಲಸವನ್ನು ಮಾಡಲಾಗಿದೆ.

ಈ ಪುಸ್ತಕದ ಎರಡನೇ ಅಧ್ಯಾಯವು, ನೈಸರ್ಗಿಕ, ಭೌತಿಕ ಮತ್ತು ಸಾಮಾಜಿಕ ಪರಿಸರ ಸೇರಿದಂತೆ ಒಟ್ಟಾರೆ ಕಲಿಕಾ ಪರಿಸರಕ್ಕೆ ಕೆ.ಎಫ್.ಐ ಶಾಲೆಗಳು ಹೇಗೆ ಪ್ರಾಮುಖ್ಯತೆಯನ್ನು ನೀಡುತ್ತಿವೆ ಎಂಬುದನ್ನು ವರ್ಣಿಸುತ್ತದೆ. ಸಾಮಾಜಿಕ ವಿಜ್ಞಾನ ವಿಷಯಗಳನ್ನು ಬೋಧಿಸಲು ಅಳವಡಿಸಿದ ಕಲಿಕಾ ವಿಧಾನವಾಗಿರುವ 'ಪ್ರದೇಶ ಅಧ್ಯಯನ' (Area Study) ಅಭ್ಯಾಸವನ್ನು ಲೇಖಕರು ವಿವರಿಸುತ್ತಾರೆ. ನಿಗದಿತ ಪಠ್ಯಪುಸ್ತಕಗಳ ಆಚೆಗೆ ಸಾಗಿ, ಅನುಭವಜನ್ಯ ವಿಧಾನವನ್ನು (experiential approach) ಬಳಸಿ, ಬಹು ಶಿಸ್ತೀಯ ಮಸೂರದ (multi-disciplinary lens) ಮೂಲಕ, ಕಾಲ ಕಳೆದಂತೆ ಹಿರಿಯ ವಿದ್ಯಾರ್ಥಿಗಳು ತಮ್ಮ ಅಕ್ಕಪಕ್ಕದ ಭೌಗೋಳಿಕ ಪ್ರದೇಶವನ್ನು ಅಧ್ಯಯನ ಮಾಡುವಂತೆ ಗುಂಪು ಕಾರ್ಯಯೋಜನೆಗಳನ್ನು (group projects) ವಿನ್ಯಾಸಗೊಳಿಸಲಾಗಿದೆ. ಅಧ್ಯಯನ ಮತ್ತು ಕಲಿಕೆಯ ವೈರುಧ್ಯದ (studying versus learning) ದ್ವಿಭಜನೆಯನ್ನು (dichotomy) ಬಳಸಿ, ಲೇಖಕರು ಮುಂದಿನ ಅಧ್ಯಾಯಕ್ಕೆ ಸಾಗುತ್ತಾರೆ. ಇಲ್ಲಿ ಅನ್ವೇಷಣೆ, ಸೃಜನಶೀಲ ಚಿಂತನೆ ಮತ್ತು ಬಹು ಶಿಸ್ತೀಯ ವಿಧಾನಗಳ ಮೂಲಕ ವಾಸ್ತವಿಕ ಪ್ರಪಂಚದ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಒತ್ತು ನೀಡಲಾಗಿದೆ. 'ಡಿಸೈನ್ ಲ್ಯಾಬ್'ನ ('Design Lab') ಕಲ್ಪನೆಯನ್ನು, ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯು ಎತ್ತಿದ ಪ್ರಶ್ನೆಯು, ಮನೆಯಲ್ಲೇ ಬಳಸುವುದಕ್ಕಾಗಿ ಸಾಬೂನನ್ನು ತಯಾರಿಸುವ ಯೋಜನೆಗೆ ಹೇಗೆ ಕಾರಣವಾಯಿತು ಎಂಬ ನಿದರ್ಶನದ ಮೂಲಕ ವಿವರಿಸಲಾಗಿದೆ. ಇಂತಹ ಕಾರ್ಯಯೋಜನೆಗಳು ಮೂರ್ತ ಹಾಗೂ ಅಮೂರ್ತ ವಿಷಯಗಳ ಕಲಿಕೆಗೆ ಕಾರಣವಾಗುತ್ತವೆ ಎಂಬುದಾಗಿ ಪ್ರಭು ಅವರು ತಿಳಿಸುತ್ತಾರೆ. ಅಮೂರ್ತ (intangible) ವಿಚಾರಗಳು ಅಮೂಲ್ಯವಾಗಿದ್ದು, ಸ್ಪರ್ಧಾ ಮನೋಭಾವ ಇಲ್ಲದೆಯೇ ಸಾಮಾನ್ಯ ಉದ್ದೇಶವೊಂದಕ್ಕಾಗಿ ಕೊಡುಗೆ ನೀಡಲು ಮಕ್ಕಳನ್ನು ಉತ್ತೇಜಿಸುವುದಾಗಿದೆ. ಇಂತಹ ಕಾರ್ಯಯೋಜನೆಗಳು, ಮಕ್ಕಳ ವೈಯಕ್ತಿಕ ಸಾಮರ್ಥ್ಯ ಮತ್ತು ಕಲಿಕಾ ಶೈಲಿಗೆ ಕೊಡುಗೆ ನೀಡುವುದಕ್ಕೆ ಮಾತ್ರವಲ್ಲದೆ ಅವರಲ್ಲಿ ಸಹಕಾರ ಮತ್ತು ಸಹಯೋಗ ಮನೋಭಾವವನ್ನು ರೂಪಿಸಲು ಸಹಾಯ ಮಾಡುತ್ತವೆ ಎಂದು ಶಿಕ್ಷಕರು ನಂಬಿದ್ದಾರೆ. ಸಹಕಾರ ಮತ್ತು ಅನುಭವಜನ್ಯ ಕಲಿಕೆಯ ಚೇತನವನ್ನು ಮುಂದಿನ ಅಧ್ಯಾಯಕ್ಕೆ ವಿಸ್ತರಿಸಲಾಗಿದೆ. ಕಲಿಕೆಯಲ್ಲಿ ಜಾನಪದ ನೃತ್ಯ ಮತ್ತು ರಂಗಭೂಮಿ ಮುಂತಾದ ವಿವಿಧ ಕಲಾ ಪ್ರಕಾರಗಳು ಹೇಗೆ ಪ್ರಮುಖ ಸಾಧನಗಳಾಗಿ ಕೆಲಸ ಮಾಡುತ್ತವೆ ಎಂಬುದನ್ನು ಹೇಳಲಾಗಿದೆ. 'ಸಂಬಂಧದ ಪ್ರತಿಬಿಂಬದಲ್ಲಿ ಮಾತ್ರವೇ ತನ್ನ ಕುರಿತು ಒಬ್ಬನು ಕಲಿತುಕೊಳ್ಳಬಹುದು' ಎಂದು ಕೃಷ್ಣಮೂರ್ತಿ ಹೇಳಿದ್ದಾರೆ. ಈ ವಿಚಾರವನ್ನು ಆಧರಿಸಿ, ಪುಸ್ತಕದಲ್ಲಿ ವಿವಿಧ ಅಭ್ಯಾಸಗಳ ಉದಾಹರಣೆಗಳನ್ನು ನೀಡಲಾಗಿದೆ –ಒಟ್ಟಿಗೆ ಊಟ ಮಾಡುವುದು, ಸಮುದಾಯ ಕೆಲಸದಲ್ಲಿ ಮಕ್ಕಳು ತೊಡಗಿಸಿಕೊಳ್ಳುವುದು, ಮಾನವ ದುಡಿಮೆಯ ಘನತೆ (ಸರದಿ ವ್ಯವಸ್ಥೆಯ ಮೂಲಕ – ಇಲ್ಲಿ ಎಲ್ಲಾ ಮಕ್ಕಳು ಪಾತ್ರೆ ತೊಳೆಯುವ ಕೆಲಸ ಮತ್ತು ಊಟದ ಸ್ಥಳವನ್ನು ಸ್ವಚ್ಛಗೊಳಿಸಬೇಕಾಗುತ್ತದೆ)

ಇತ್ಯಾದಿಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇವೆಲ್ಲ ವಿಚಾರಗಳು ಸಂಬಂಧವನ್ನು ರೂಪಿಸುವುದು, ಪರಸ್ಪರ ಗೌರವ ಮತ್ತು ಸಮುದಾಯ ಭಾವನೆಯನ್ನು ಉತ್ತೇಜಿಸುತ್ತವೆ. ಈ ಎಲ್ಲಾ ಅಭ್ಯಾಸಗಳು, ಮಕ್ಕಳಲ್ಲಿ ಸಂವೇದನೆಯನ್ನು ಪೋಷಿಸುವ ವಿಧಾನಗಳಾಗಿವೆ ಎಂದು ಪ್ರಭು ಅವರು ವಿವರಿಸುತ್ತಾರೆ.

ಕೊನೆಯ ಅಧ್ಯಾಯವು, ಭಾರತದಲ್ಲಿ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ವಿವಿಧ ರೂಪಗಳಲ್ಲಿ ವ್ಯಾಪಕವಾಗಿ ಮನೆ ಮಾಡಿರುವ ಭೀತಿಯ ಭಾವನೆಯನ್ನು ಪರಿಶೀಲಿಸುತ್ತದೆ. ವಿಪರೀತ ಪ್ರಾಮುಖ್ಯತೆಯನ್ನು ಪಡೆದಿರುವ ಪರೀಕ್ಷೆಗಳು ಮತ್ತು ಅವರ ಕಲಿಕಾ ಅನುಭವದ ಮೇಲೆ ಇವು ಹೊಂದಿರುವ ಪರಿಣಾಮಗಳ ಕಾರಣ ಮಕ್ಕಳು ಅನುಭವಿಸುವ ಭೀತಿ ಮತ್ತು ಒತ್ತಡವನ್ನು ತೋರಿಸುವುದಕ್ಕಾಗಿ ಲೇಖಕರು ಸಾಂಪ್ರದಾಯಿಕ ಪರೀಕ್ಷಾ ವ್ಯವಸ್ಥೆಯನ್ನು ವಿಶದೀಕರಿಸುತ್ತಾರೆ. ಕೆ.ಎಫ್.ಐ ಶಾಲೆಗಳಲ್ಲಿ, ಪುರಸ್ಕಾರ ಮತ್ತು ಶಿಕ್ಷೆಯನ್ನು ಪ್ರತಿಬಂಧಿಸುವ ವಿಧಾನಗಳನ್ನು ಅಳವಡಿಸುವ ಮೂಲಕ ಮತ್ತು ದೈನಂದಿನ ಶಾಲಾ ಪರಿಸರವನ್ನು ಸ್ಪರ್ಧೆಯಿಂದ ಮುಕ್ತಗೊಳಿಸುವ ಮೂಲಕ ಹಾಗೂ ತರಗತಿಗಳ ರಚನೆ ಮತ್ತು ಪಠ್ಯಕ್ರಮದ ವಿನ್ಯಾಸದಲ್ಲಿ ಮಿಶ್ರ ವಯಸ್ಸಿನ ಗುಂಪನ್ನು (Mixed Age Grouping) ರೂಪಿಸುವ ಮೂಲಕ ಹೋಲಿಕೆಯಿಂದ ಮುಕ್ತಗೊಳಿಸಿ, ಒತ್ತಡ ಮತ್ತು ಭೀತಿಗೆ ಸಂಬಂಧಿಸಿದ ಸಾಧನೆಯನ್ನು ಹೊರಗಿಡಲಾಗಿದೆ.

ಒಬ್ಬ ಓದುಗಳಾಗಿ, ಈ ಪುಸ್ತಕವು ನನಗೆ ಅನೇಕ ರೀತಿಯಲ್ಲಿ ಇಷ್ಟವಾಗುತ್ತದೆ. ಉದಾಹರಣೆಗಳು ಮತ್ತು ಮಕ್ಕಳು ಹಾಗೂ ಶಿಕ್ಷಕರ ಜೊತೆಗಿನ ಸಂವಾದದ ಮೂಲಕ ನಿರೂಪಿಸಲಾದ, ಅಭ್ಯಾಸಗಳ ಸಮೃದ್ಧ ಮತ್ತು ವಿವರಣಾತ್ಮಕ ಚಿತ್ರಣಗಳನ್ನು ಓದುವುದನ್ನು ನಾನು ಆನಂದಿಸಿದೆ. ಈ ಪುಸ್ತಕದಲ್ಲಿ ವಿವರಿಸಲಾಗಿರುವ ಸರಿಸುಮಾರು ಎಲ್ಲಾ ಅಭ್ಯಾಸಗಳು ಇಷ್ಟವಾಗುತ್ತವೆ ಹಾಗೂ ಚಿಕ್ಕ ಮಕ್ಕಳ ಶಿಕ್ಷಣದ ಕುರಿತು ನಾನು ಹೊಂದಿರುವ ನಂಬಿಕೆಗಳ ಜೊತೆ ತಾಳೆಯಾಗುತ್ತವೆ. ಹೀಗಾಗಿ, ಮೊದಲ ನೋಟದಲ್ಲಿ ಈ ಪುಸ್ತಕವು, ಶಿಕ್ಷಣದ ಸಿದ್ಧಾಂತವನ್ನು ಪ್ರಾಯೋಗಿಕ ರೂಪಕ್ಕೆ ಪರಿವರ್ತಿಸಿರುವ ಕುರಿತ ಸಮಗ್ರ ಸಂಗ್ರಹವಾಗಿ ತನ್ನ ಉದ್ದೇಶವನ್ನು ಈಡೇರಿಸುತ್ತದೆ.

ಆದರೆ, ಒಬ್ಬ ಶಿಕ್ಷಕಿಯಾಗಿ ನಾನು ಇನ್ನೂ ಸಾಕಷ್ಟು ನಿರೀಕ್ಷೆಯನ್ನು ಹೊಂದಿದ್ದೇನೆ. ಈ ಪುಸ್ತಕದಲ್ಲಿನ ಶಿಕ್ಷಣಶಾಸ್ತ್ರೀಯ ಅಭ್ಯಾಸಗಳ (pedagogical practices) ವಿವರಣೆಯು ಒಂದಷ್ಟು ಮಟ್ಟಿಗೆ ಅಪಾರದರ್ಶಕವಾಗಿದೆ. ಇವುಗಳನ್ನು ಕೃಷ್ಣಮೂರ್ತಿಯವರ ಶೈಕ್ಷಣಿಕ ಸಿದ್ಧಾಂತದ ಆಧಾರದ ಮೇಲೆ ನಿರೂಪಿಸಲಾಗಿದೆ. ಆದರೆ ಇದರ ಹಿಂದಿನ ತಾರ್ಕಿಕತೆಯನ್ನು ವಿವರಿಸುವ ಯತ್ನವು ಸ್ವಲ್ಪ ಅರೆಮನಸ್ಸಿನಿಂದ ಕೂಡಿದೆ. ಮುಖ್ಯವಾಗಿ ಇವರು ಹೊಂದಿರುವ ಶೈಕ್ಷಣಿಕ ಸಿದ್ಧಾಂತದ ಕುರಿತು ಆಳವಾದ ಒಳನೋಟವನ್ನು ಹೊಂದಿರದೆ ಇರುವವರಿಗೆ ಈ ರೀತಿ ಭಾಸವಾಗುತ್ತದೆ. ಒಂದು ವೇಳೆ ಈ ಪುಸ್ತಕದ ಉದ್ದೇಶವು (ಲೇಖಕರು ಮತ್ತು ಪ್ರಕಾಶಕರು ಹೇಳಿಕೊಂಡಿರುವಂತೆ), ಈ ಅಭ್ಯಾಸಗಳು ಪರ್ಯಾಯ ಶಾಲಾ ವ್ಯವಸ್ಥೆಯೊಳಗೆಯೇ ಇರಬೇಕಾದ ಅಗತ್ಯವಿಲ್ಲ ಹಾಗೂ ಸಾಮಾನ್ಯ ಶಾಲೆಗಳು ಸಹ ಅಳವಡಿಸಿಕೊಳ್ಳಬಹುದು ಎಂಬುದನ್ನು ತೋರಿಸುವುದಾಗಿದ್ದರೆ, ಈ ಪುಸ್ತಕವು ತನ್ನ ಉದ್ದೇಶವನ್ನು ಈಡೇರಿಸುವಲ್ಲಿ ಹಿನ್ನಡೆ ಅನುಭವಿಸುತ್ತದೆ. ಪರ್ಯಾಯ ಶಾಲಾ ವ್ಯವಸ್ಥೆ ಮತ್ತು ಇದರ ಇತಿಹಾಸ ಹಾಗೂ ಭಾರತದ ಸಮಕಾಲೀನ ಸನ್ನಿವೇಶದಲ್ಲಿ ಇದರ ಪ್ರಸ್ತುತತೆಯ ಕುರಿತು ಲೇಖಕರು ಇನ್ನಷ್ಟು ಆಳಕ್ಕೆ ಇಳಿಯಬೇಕಿತ್ತು ಎಂದು ಸಹ ನನಗೆ ಅನಿಸಿತು. ಪುಸ್ತಕದ ಆಕರ್ಷಣೆ ಮತ್ತು ಸಾಮರ್ಥ್ಯವು, ಈ ಅಭ್ಯಾಸಗಳನ್ನು ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿ ಅಳವಡಿಸುವ ಸಾಧ್ಯತೆಯನ್ನು ಎದುರು ನೋಡುತ್ತಿರುವ ನಮ್ಮಂತಹ ಬಹುಪಾಲು ಜನರ ಮನವೊಲಿಸುವಲ್ಲಿ ಹುದುಗಿದೆ. ಆದರೆ ಈ ರೀತಿ ಮಾಡುವುದರ್ಕ್ಗಿ ಪರ್ಯಾಯ ಶಾಲಾ ವ್ಯವಸ್ಥೆಯ (alternative school system) ಸುತ್ತ ಹೆಣೆಯಲಾಗಿರುವ ಅತೀಂದ್ರಿಯವಾದವನ್ನು (mysticism) ಹೋಗಲಾಡಿಸಬೇಕು ಮತ್ತು ಈ ಅಭ್ಯಾಸಗಳು ಯಾವ ಸನ್ನಿವೇಶದೊಳಗೆ ಇವೆಯೋ ಆ ಸನ್ನಿವೇಶವನ್ನು ಹೊಂದಿಸಬೇಕು. 'ಮೀನಾಕ್ಷಿ ಥಪನ್ಸ್ ಲೈಫ್ ಆಟ್ ಸ್ಕೂಲ್ – ಆನ್ ಎಥ್ನೋಗ್ರಾಫಿಕ್ಸ್ಸ್ಟಡಿ' (Minakshi Thapan's Life at School - An Ethnographic Study) ಎನ್ನುವುದು ಈ ನಿಟ್ಟಿನಲ್ಲಿ, ಆಂಧ್ರ ಪ್ರದೇಶದ ರಿಶಿ ವ್ಯಾಲಿ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮನಗಂಡಂತೆ, ಕೃಷ್ಣಮೂರ್ತಿಯವರ ತತ್ವದ ಆಳ, ವ್ಯಕ್ತಿನಿಷ್ಠ ವ್ಯಾಖ್ಯಾನಕ್ಕೆ ಅತ್ಯುತ್ತಮ ಉದಾಹರಣೆ ಎನಿಸುತ್ತದೆ. ಒಬ್ಬ ಓದುಗಳಾಗಿ, ಕೆ.ಎಫ್.ಐ ಶಾಲೆಯಲ್ಲಿ ಶಿಕ್ಷಕಿಯ ಚಿತ್ರಣವನ್ನು ಕಲ್ಪಿಸಿಕೊಳ್ಳಲು ನಾನು ನಿರಂತರವಾಗಿ ಹೆಣಗಾಡಿದ್ದೇನೆ. ಪುಸ್ತಕದಲ್ಲಿ ವಿವರಿಸಲಾದ ಅಭ್ಯಾಸಗಳನ್ನು ಜಾರಿಗೊಳಿಸಲು ಆಕೆ ನಿಭಾಯಿಸಿದ ಪಾತ್ರಗಳನ್ನು ಪರಿಗಣಿಸಿದಾಗ, ಶಿಕ್ಷಕಿಯ ಕುರಿತು ಸಾಕಷ್ಟು ಕಡಿಮೆ ವಿಚಾರಗಳನ್ನು ಹೇಳಲಾಗಿದೆ ಎಂದು ಅನಿಸುತ್ತದೆ. ಆ ವ್ಯಕ್ತಿ ಯಾರು? ಈ ಶೈಕ್ಷಣಿಕ ಆದರ್ಶಗಳನ್ನು ಸ್ವೀಕರಿಸಿ ಅಂತರ್ಮುಖವಾಗಿಸುವುದಕ್ಕಾಗಿ ಶಿಕ್ಷಕಿಯು ಯಾವ ರೀತಿಯ ಪ್ರಯಾಣವನ್ನು ಕೈಗೊಳ್ಳುತ್ತಾರೆ? ಆಕೆ ಹೀಗೆ ಮುಂದುವರಿಯುವಾಗ ಅನುಭವಿಸುವ ಮತ್ತು ಮೆಟ್ಟಿ ನಿಲ್ಲುವ ಹೋರಾಟಗಳು, ಸವಾಲುಗಳು ಮತ್ತು ಪರಿಮಿತಿಗಳು ಯಾವುವು? ಈ ಪ್ರಯಾಣದಲ್ಲಿ ಆಕೆಯ ಕಲಿಕೆ ಮತ್ತು ಬೆಳವಣಿಗೆಯನ್ನು ಬೆಂಬಲಿಸಲು ಮತ್ತು ಆಧರಿಸಲು ಸಂಸ್ಥೆಯು ಯಾವ ಪಾತ್ರವನ್ನು ವಹಿಸುತ್ತದೆ? ಈ ಪ್ರಶ್ನೆಗಳಿಗೆ ಉತ್ತರಿಸಲು ಒಂದು ಅಧ್ಯಾಯವನ್ನು ಮೀಸಲಿಡಬೇಕಿತ್ತು. ನನ್ನ ಪ್ರಕಾರ, ಒಬ್ಬ ಶಿಕ್ಷಕಿಯು, ಶಾಲೆಯಲ್ಲಿ ಪ್ರತಿ ದಿನವೂ ಮಕ್ಕಳು ಕೇಳುವ ಕಷ್ಟಕರ ಪ್ರಶ್ನೆಗಳನ್ನು ಹೇಗೆ ಎದುರಿಸಬೇಕು ಎಂಬ ಕುರಿತು ಸರಿಸುಮಾರು ಎಲ್ಲಾ ಸಂದರ್ಭದಲ್ಲಿ ತಿಳಿದಿರುವ, ಪರಿಪೂರ್ಣ ಹಾಗೂ ಸಂಪೂರ್ಣರಾಗಿ ಸಿದ್ಧರಾಗಿರುವ ಮೂಲಮಾದರಿ ಎನಿಸಿರುವ ಸೂಪರ್ ಮನುಷ್ಯರಂತೆ ಕಾಣಿಸಿಕೊಳ್ಳುತ್ತಾರೆ.

ಇದೇ ರೀತಿಯ ಪ್ರಯತ್ನದಲ್ಲಿ, ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು ತಮ್ಮ ಯೋಚನೆ ಮತ್ತು ಅಭ್ಯಾಸದಿಂದ ಪಡೆದ ಮೌಲ್ಯಗಳು ಮತ್ತು ಕಲಿಕೆಯನ್ನು ಮೈಗೂಡಿಸುವಲ್ಲಿ ಏಕರೂಪತೆಯನ್ನು ಹೊಂದಿದ್ದಾರೆ ಎಂಬುದಾಗಿ ಈ ಪುಸ್ತಕವು

ಹೇಳುತ್ತದೆ. ಮಕ್ಕಳು ಯಾವ ರೀತಿ ಈ ಅಭ್ಯಾಸಗಳನ್ನು ಪ್ರಶ್ನಿಸುತ್ತಾರೆ ಮತ್ತು ಅವರ ಭೀತಿಯನ್ನು ಹೋಗಲಾಡಿಸಲು ನಿರಂತರ ಸಂವಾದ ಮತ್ತು ತರ್ಕವನ್ನು ಶಿಕ್ಷಕರು ಹೇಗೆ ಬಳಸುತ್ತಾರೆ ಎಂಬ ಕುರಿತು ಕೆಲವು ಉಪಾಖ್ಯಾನಗಳನ್ನು ಲೇಖಕರು ವಿವರಿಸುತ್ತಾರೆ. ಆದರೆ ಬಾಲಪ್ರೌಢರು (precocious adolescent) ಈ ಅಭ್ಯಾಸಕ್ಕೆ ಪ್ರತಿರೋಧ ತೋರಿದ ಅಥವಾ ಪ್ರಶ್ನಿಸಿದ ಅಥವಾ ಪೋಷಕರು ಶಾಲೆಯ ನೀತಿಯ ಕುರಿತು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ನಿದರ್ಶನಗಳು ಇಲ್ಲವೇ? ದೈನಂದಿನ ಆಧಾರದಲ್ಲಿ ಈ ಶೈಕ್ಷಣಿಕ ಆದರ್ಶಗಳನ್ನು ಮೂರ್ತರೂಪಕ್ಕೆ ತರುವಲ್ಲಿ ಎದುರಿಸಿದ ಸವಾಲುಗಳು ಮತ್ತು ವೈಫಲ್ಯತೆಗಳು ಹಾಗೂ ಈ ಕಾರಣದಿಂದಾಗಿ ಕಾಲ ಕಳೆದಂತೆ ಈ ಅಭ್ಯಾಸಗಳು ಯಾವ ರೀತಿ ಕೆಲವೊಂದು ಮಾರ್ಪಾಡು ಮತ್ತು ಮರುವ್ಯಾಖ್ಯಾನಕ್ಕೆ ಒಳಗಾಗಿವೆ ಎಂಬ ಕುರಿತು ಕೆಲವೊಂದು ಮಿನುಗುನೋಟಗಳನ್ನು ಈ ಪುಸ್ತಕವು ನೀಡಬೇಕಿತ್ತು. ಅತ್ಯುತ್ತಮ ಅಭ್ಯಾಸಗಳನ್ನು ಯಶೋಗಾಥೆಗಳ ರೂಪದಲ್ಲಿ ಮಾತ್ರವೇ ಏಕವರ್ಣೀಯವಾಗಿ ಪ್ರಸ್ತುತ-ಪಡಿಸುವುದರಿಂದ, ಈ ಪುಸ್ತಕವು ಹೊಂದಿರಬಹುದಾಗಿದ್ದ ಶೈಕ್ಷಣಿಕ ಸಾಮರ್ಥ್ಯಕ್ಕೆ ನ್ಯಾಯ ಒದಗಿಸಿದಂತೆ ಆಗುವುದಿಲ್ಲ. ಇವುಗಳ ಆಳ, ವಿಮರ್ಶಾತ್ಮಕ ಮತ್ತು ಹೆಚ್ಚು ವಿಶ್ಲೇಷಣಾತ್ಮಕ ದೃಷ್ಟಿಕೋನವು, ತಮ್ಮದೇ ಆದ ವ್ಯವಸ್ಥೆಯಲ್ಲಿ ಈ ವಿಚಾರಗಳ ಅನ್ವಯಿಸುವಿಕೆಯ ಮಾಧ್ಯಮವಾಗಿ ಈ ಪುಸ್ತಕವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಬಳಸಲು ಶಿಕ್ಷಕರಿಗೆ ಸಹಾಯ ಮಾಡುತ್ತಿತ್ತು.

ಒಟ್ಟಾರೆಯಾಗಿ, ದೇಶಕ್ಕಾಗಿ ಶಾಲಾ ಶಿಕ್ಷಣದ ಪ್ರಗತಿಶೀಲ ದೃಷ್ಟಿಕೋನವನ್ನು ಪ್ರತಿಧ್ವನಿಸುವ, ಜೆ. ಕೃಷ್ಣಮೂರ್ತಿ ಅವರ ಅತ್ಯಂತ ಒಳನೋಟವುಳ್ಳ ಶೈಕ್ಷಣಿಕ ಸಿದ್ಧಾಂತದಿಂದ ಸುಸಂಘಟಿತವಾಗಿ ಹೊರಹೊಮ್ಮಿದ ಅಭ್ಯಾಸಗಳನ್ನು ವಿಸ್ತೃತವಾಗಿ ನಿರೂಪಿಸುವಲ್ಲಿ ಈ ಪುಸ್ತಕವು ಒಳ್ಳೆಯ ಸಾಧನೆಯನ್ನು ಮಾಡಿದೆ. ಭಾರತದ ಶಾಲೆಗಳು ಯಾವುದೇ ರೀತಿಯ ವಿಚಾರಧಾರೆ ಅಥವಾ ಸನ್ನಿವೇಶವನ್ನು ಹೊಂದಿರಲಿ, ಈ ಶೈಕ್ಷಣಿಕ ಸಿದ್ಧಾಂತದ ಕುರಿತು ಸಾಕಷ್ಟು ವಿಚಾರಗಳನ್ನು ಕಲಿಯಬಹುದು ಮತ್ತು ಈ ಪುಸ್ತಕದಲ್ಲಿ ವಿವರಿಸಲಾದ ಮೌಲ್ಯಗಳು ಮತ್ತು ಅಭ್ಯಾಸಗಳನ್ನು ಅಳವಡಿಸಿಕೊಳ್ಳಬಹುದು. ಖಂಡನೆ ಮತ್ತು ಹೋಲಿಕೆಯ ಭೀತಿ ಇಲ್ಲದೆ ಮಕ್ಕಳು ಬರಬಹುದಾದ ಸ್ಥಳವಾಗಿ ಶಾಲೆಯನ್ನು ರೂಪಿಸುವುದು, ಕಲಾಮೀಮಾಂಸೆಯ ಆಸ್ವಾದನೆಯ ಮೌಲ್ಯಗಳನ್ನು ಅಭಿವೃದ್ಧಿಪಡಿಸುವುದು, ತಮ್ಮ ಸಮುದಾಯದ ಕುರಿತು ಮಕ್ಕಳಲ್ಲಿ ಸಂವೇದನೆಯನ್ನು ರೂಪಿಸುವುದು ಮತ್ತು ವಿಜ್ಞಾನ ಹಾಗೂ ಸಾಮಾಜಿಕ ವಿಜ್ಞಾನವನ್ನು ಕಲಿಸುವುದಕ್ಕಾಗಿ ವಾಸ್ತವಿಕ ಪ್ರಪಂಚದ ಸಮಸ್ಯೆಗಳನ್ನು ಬಳಸುವುದು ಇತ್ಯಾದಿಗಳು, ದೇಶದಲ್ಲಿ ಶೈಕ್ಷಣಿಕ ಸುಧಾರಣೆಯನ್ನು ತರುವುದಕ್ಕಾಗಿ ನಾವು ತೆಗೆದುಕೊಳ್ಳಬೇಕಾದ ಶಿಕ್ಷಣಶಾಸ್ತ್ರೀಯ ಕ್ರಮಗಳಿಗೆ ಅತ್ಯುತ್ತಮ ಉದಾಹರಣೆಗಳಾಗಿವೆ. ಈ ವಿಚಾರಗಳನ್ನು ಪುಸ್ತಕವು ಚೆನ್ನಾಗಿ ಪ್ರಸ್ತುತಪಡಿಸಿದ್ದರೂ, ಈ ವಿಚಾರಗಳ ಹಿಂದಿನ ಯೋಚನೆಗಳ ಕುರಿತು ಆಳವಾದ ಒಳನೋಟವನ್ನು ಅಭಿವೃದ್ಧಿಪಡಿಸದೆ ಹಾಗೂ ಅವು ಎದುರಿಸಬಹುದಾದ ಅಪಾಯಗಳು ಮತ್ತು ಸವಾಲುಗಳನ್ನು ಅರಿತುಕೊಳ್ಳದೆ ಈ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೊದಲು ಶಾಲಾ ಮುಖ್ಯಸ್ಥರು ಎಚ್ಚರಿಕೆ ವಹಿಸಬೇಕು. ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವಿವಿಧ ಸಹಭಾಗಿಗಳಾದ ಶಿಕ್ಷಕರು, ಪೋಷಕರು, ಮಕ್ಕಳು ಮತ್ತು ಸಮುದಾಯದ ಸದಸ್ಯರ ಸಿದ್ಧತೆ ಮತ್ತು ಸನ್ನದ್ಧತೆಯು, ಅನುಷ್ಠಾನಕ್ಕೆ ಮೊದಲು ಲಭ್ಯ ಸಂಪನ್ಮೂಲಗಳ ನೈಜ ಮೌಲ್ಯಮಾಪನದಷ್ಟೇ ಪ್ರಮುಖವೆನಿಸುತ್ತದೆ. ಶೈಕ್ಷಣಿಕ ಸುಧಾರಣೆಯನ್ನು ಅಖಂಡತೆಯಿಂದ ಕೂಡಿದ ಪ್ರಯಾಣವಾಗಿ ಪರಿಗಣಿಸಿದಾಗ, ಅದನ್ನು ಪ್ರಾರಂಭಿಸಲು ಯಾವುದೇ ಆದರ್ಶ ಸಮಯ ಅಥವಾ ಸಿದ್ಧತೆಯ ಹಂತ ಎನ್ನುವುದು ಇಲ್ಲ ಎಂಬುದನ್ನು ನಾವು ಮನಗಾಣಬೇಕು.



ಅಂಕುರ್ ಮದನ್ ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಿದ್ದಾರೆ. ಮಗುವಿನ ಬೆಳವಣಿಗೆ (Child Development) ಮತ್ತು ಸಮನ್ವಯ ಶಿಕ್ಷಣ (Inclusive Education) ಅವರ ಬೋಧನಾ ಮತ್ತು ಸಂಶೋಧನೆಯ ವಿಷಯವಾಗಿದೆ. ಅವರನ್ನು ankur.madan@apu.edu.in ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲನೆ: **ಲತಾ ಕೆ.ಸಿ.**